Sri H. SIDDAVEERAPPA.—Perhaps the Hon'ble Member is aware that many of our probationers are now undergoing training in Germany and other places and some of them under the Indo-German scheme. The moment they come back and the moment they are shown to be fit to shoulder the responsibilities, they will be fixed in proper places.

ಶ್ರೀ ಬಿ. ಹುಚ್ಚೇಗೌಡ.—ಈ ರೀತಿ ಎಕ್ಸ್‌ಟೆಂಷನ್ ಕೊಟ್ಟಿರುವುದು ನೋಡಿದರೆ ಪ್ರೊಬೇಷನರುಗಳ ಪೈಕಿ ಲಾಯಕ್ಕಾದವರು ಯಾರೂ ಇಲ್ಲವೆಂದು ಭಾವಿಸೋಣವೇ ?

Sri H. SIDDAVEERAPPA.—I have made the position abundantly clear and at the cost of repetition I state once again that it is only wherever they were considered essential in the discretion of the Government they have been kept.

ಶ್ರೀ ಬಿ. ಹುಚ್ಚೇಗೌಡ.—ಹಾಗಾದರೆ ತಾವು ಈ ರೀತಿ 3-4 ಎಕ್ಸ್‌ಟೆಂಷನ್‌ಗಳನ್ನು ಕೊಟ್ಟಿರುವುದರಿಂದ ಕೆಳಗಿನವರು ಮೇಲಿನ ಸ್ಥಾನಗಳಿಗೆ ಬರಲು ಅವಕಾಶ ವಿಲ್ಲದೆ ಅವರ ಕೆಲಸದ ವಿಚಾರದಲ್ಲಿ ನಿರಾಶರಾಗಿರುವುದರಿಂದ ಅವರು ನಿರ್ವಹಿಸುವ ಕೆಲಸದ ದಕ್ಷತೆಗೆ ಧಕ್ಕೆ ಬಂದಿದೆಯೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ?

Sri H. SIDDAVEERAPPA.—Sir, my answer is the same as that I gave to Sri Boranna Gowda.

ಶ್ರೀ ಎಸ್. ಗೋಪಾಲಗೌಡ.—ಮೆಟಲರ್ಜಿಯಲ್ಲಿ ಉಚ್ಚ ಶಿಕ್ಷಣ ಪಡೆದುಬರಲು ಶ್ರೀ ಆರ್. ಕೆ. ಪ್ರಸಾದ್ ಎಂಬವರನ್ನು ಅಮೇರಿಕಾಕ್ಕೆ ಕಳುಹಿಸಲಾಗಿತ್ತೆ ?

ಶ್ರೀ ಎಚ್. ಸಿದ್ದವೀರಪ್ಪ.—ನೋಟಿಸ್.

ಶ್ರೀ ಎಸ್. ಗೋಪಾಲಗೌಡ.—ಅವರು ಫೆರ್ರೋಸಿಲಿಕಾನ್ ಇಂಡಸ್ಟ್ರೀಸ್‌ನ ಸೂಪರಿಂಟೆಂಡೆಂಟ್‌ರಾಗಿದ್ದರಲ್ಲವೇ?

ಶ್ರೀ ಎಚ್. ಸಿದ್ದವೀರಪ್ಪ.—ಹೌದು

ಶ್ರೀ ಎಸ್. ಗೋಪಾಲಗೌಡ.—ಅವರನ್ನು ಈಗ ಪುನಃ ವಿಶ್ವವಿದ್ಯಾನಿಲಯಕ್ಕೆ ಪ್ರೊಫೆಸರಾಗಿ ನೇಮಕ ಮಾಡುವ ರೀತಿಯಲ್ಲಿ ಆರ್ಡರಾಗಿದೆಯೇ ?

ಶ್ರೀ ಎಚ್. ಸಿದ್ದವೀರಪ್ಪ —ಆಗಿದೆ.

ಶ್ರೀ ಎಸ್. ಗೋಪಾಲಗೌಡ.—ಆ ರೀತಿ ಮಾಡಲು ಕಾರಣಗಳೇನೆಂಬುದನ್ನು ದಯವಿಟ್ಟು ತಿಳಿಸಲು ಸಾಧ್ಯವೇ ?

Sri H. SIDDAVEERAPPA.—Thank you very much. Exigency of service.

ಶ್ರೀ ಎಸ್. ಗೋಪಾಲಗೌಡ.—ಈ ರೀತಿ ಸರ್ಕಾರಿ ವೇತನ ಕೊಟ್ಟು ಯಾರನ್ನಾದರೂ ಉಚ್ಚಶಿಕ್ಷಣದಲ್ಲಿ ತರಪೇತುಮಾಡಿದ ಮೇಲೆ ಅಂಥವರನ್ನು ಅದೇ ಉದ್ಯೋಗದಲ್ಲಡುವುದು ಸಾರ್ವಜನಿಕರ ಮತ್ತು ಸರ್ಕಾರದ ಹಿತದೃಷ್ಟಿಯಿಂದ ಒಳ್ಳೆಯದಲ್ಲವೇ ?

Sri H SIDDAVEERAPPA.—If other things are equal.

ಶ್ರೀ ಎಸ್. ಗೋಪಾಲಗೌಡ.—ಅವರ ವಿಚಾರದಲ್ಲಿ ಅಂಥ unequal ಆಗಿರುವ ಅಂಶಗಳಾವುವು ?

Sri H. SIDDAVEERAPPA.—The report that I have received about that officers is that his services are not necessary there.

ಶ್ರೀ ಎಸ್. ಗೋಪಾಲಗೌಡ.—ಅವರು ಅಲ್ಲಿ ಸೂಪರಿಂಟೆಂಡೆಂಟ್ ಆದಮೇಲೆ ಅಲ್ಲಿಯ ಉತ್ಪತ್ತಿ ಹೆಚ್ಚಾಗಿಲ್ಲವೇ ?

ಶ್ರೀ ಎಚ್. ಸಿದ್ದವೀರಪ್ಪ.—ನೋಟಿಸ್.

ಶ್ರೀ ಎಸ್. ಗೋಪಾಲಗೌಡ.—ಹಾಗೆ ಅವರ ಮೇಲೆ ಯಾವ ಛಾರ್ಜನ್ನೂ ಇಲ್ಲದೆ ಇದ್ದರೆ ಪುನಃ ಅವರನ್ನು ಅದೇ ಕೆಲಸಕ್ಕೆ ನೇಮಿಸುತ್ತೀರಾ ?

Sri H. SIDDAVEERAPPA.—I will examine his case with an open mind.

ಶ್ರೀ ಜಿ. ಬಸಪ್ಪ.—Technical knowledge ಎಂದರೇನು ?

ಶ್ರೀ ಎಚ್. ಸಿದ್ದವೀರಪ್ಪ.—ಹಾಗೆಂದರೆ ಪಾರಿಭಾಷಿಕ ಜ್ಞಾನವನ್ನು ಸಂಪಾದಿಸಿರುವುದೆಂದರ್ಥ.

Hessarghatta Government Fruit Garden

Q.—418. **Sri R. MUNISWAMIAH** (Bangalore North—Scheduled Castes).—Will the Government be pleased to state :—

(*a*) what are the fruit trees and plants that are grown in the Government Fruit Garden at Hessarghatta ;

(*b*) the yield realised monthwar, since 1st April 1951 to 1st February 1953 (in rupees) ;

(*c*) the establishment cost incurred since 1st April 1951 to 1st February 1953 ;

(*d*) the designation and qualification of the head and subordinates of the section including menials ;

(*e*) the quantity of manure purchased since 1st February 1951 to 1st February 1953 with cost (monthwar statement may be given) ;

(*f*) the amount of profit realised since 1st April 1951 to 31st March 1952, 1st April 1952 to 1st February 1953 ?

A.—**Sri H. SIDDAVEERAPPA.**—

(*a*) Statement 'A' appended below.

(*b*) Statement 'B' appended below.

(*c*) Rs. 13,354-9-0.

(*d*) Statement 'C' appended below.

(*e*) Statement 'D' appended below.

(*f*) No profit.

STATEMENT 'A'.

Statement of fruit trees and plants grown in Hessarghatta Fruit Garden :—
(i) Apple, (ii) Guava, (iii) Butterfruit, (iv) Sapodilla, (v) Papaya, (vi) Fig, (vii) Litchi, (viii) Banana, (ix) Pomegranate, (x) Mango, (xi) Grapes, (xii) Peach, (xiii) Custard apple.

STATEMENT 'B'.

Statement showing the yield realised in the Hessarghatta Fruit Garden from 1st April 1951 to 1st February 1953 :—

	Rs.	a.	p.		Rs.	a.	p.
1st April 1951 ...	962	14	6	1st March 1952 ...	1,000	11	6
1st May 1951 ...	1,957	7	3	1st April 1952 ...	1,664	14	0
1st June 1951 ...	1,039	8	9	1st May 1952 ...	1,587	14	6
1st July 1951 ...	1,413	9	0	1st June 1952 ...	665	0	0
1st August 1951 ...	1,412	0	0	1st July 1952 ...	438	2	3
1st September 1951 ...	1,608	15	0	1st August 1952 ...	959	6	6
1st October 1951 ...	1,906	10	3	1st September 1952 ...	1,052	11	9
1st November 1951 ...	1,259	14	0	1st October 1952 ...	1,065	0	0
1st December 1951 ...	2,843	3	0	1st November 1952 ...	672	2	0
1st January 1952 ...	1,340	13	6	1st December 1952 ...	464	2	6
1st February 1952 ...	954	0	9	1st January 1952 ...	386	5	3

STATEMENT 'C'.

Statement showing the details of the designations and qualifications of the Officer and subordinates of the Hessarghatta Fruit Garden :—

Designation	*Qualification*
(1) Superintendent	B.Sc. (Hons.), Ph.D.
(2) Assistant Manager	B.Sc. Diploma in Fruit Technology, Dip. in Horticulture.
(3) 2 Foremen	(i) Vacant. (ii) S.S.L.C. Course; Agricultural Fieldman's Training.
II Division Clerk	S.S.L.C. Course and Accounts Higher.
Laboratory Attender... ...	Experience of Laboratory.
Jamedar	
Three Chowkidars.	
Two Servants.	

STATEMENT 'D'.

			Rs.	a.	p.
23rd July 1951 ...	Steamed Bone-meal 2×195 lb.	...	60	15	0
26th August 1951 ...	Cattle-yard manure 50 carts	...	196	14	0
17th September 1951.	Do do	...	224	7	0
1st October 1952 ...	Groundnut cake powder $2\frac{1}{2}+3\frac{1}{2}$ tons	...	728 520	11 0	6 0
Do do ...	Ammonium Sulphate—$\frac{1}{2}$ ton	...	190	0	0
16th January 1953 ...	Superphosphate—$\frac{1}{2}$ ton	...	125	0	0
	Farmyard manure—50 cartloads	...	101	9	0
30th January 1953 ...	Ammonium sulphate—$\frac{1}{2}$ ton Superphosphate—$\frac{1}{2}$ ton	...	848	0	9

ಶ್ರೀ ಆರ್. ಮುನಿಸ್ವಾಮಯ್ಯ.—ಹೆನರಘಟ್ಟದ ಸರ್ಕಾರಿ ಹಣ್ಣಿನ ತೋಟದಲ್ಲಿ ಎಷ್ಟು ವರ್ಷದಿಂದ ಲಾಭ ಬರುತ್ತಿಲ್ಲ?

ಅಧ್ಯಕ್ಷರು.—ಉತ್ತರದಲ್ಲಿ ತಿಳಿಸಿದೆ.

ಶ್ರೀ ಆರ್. ಮುನಿಸ್ವಾಮಯ್ಯ.—ಲಾಭ ಬರುತ್ತಿಲ್ಲವೆಂದು ಮಾತ್ರ ಹೇಳಿದೆ. ಆದರೆ ಎಷ್ಟು ವರ್ಷದಿಂದ ಎಂಬುದು ತಿಳಿಸಿಲ್ಲ!

Sri H. SIDDAVEERAPPA.—If I remember correctly, about five years.

ಶ್ರೀ ಆರ್. ಮುನಿಸ್ವಾಮಯ್ಯ.—ಇದು ಲಾಭದಾಯಕವಾಗಿಲ್ಲದಿದ್ದರೆ ಈ ಹಣ್ಣಿನ ತೋಟವನ್ನು ನಡೆಸಿದಿರುವುದೇ ಒಳ್ಳೆಯದಲ್ಲವೇ!

ಶ್ರೀ ಎಚ್. ಸಿದ್ದವೀರಪ್ಪ.—ಈ ವಿಚಾರದಲ್ಲಿ ಆ ರೀತಿ ಲೆಕ್ಕಾಚಾರಮಾಡುವುದಕ್ಕಾಗುವುದಿಲ್ಲ. It is more a research station and invariably it is the experince of everybody that research stations cannot be of the same type as paying stations.

ಶ್ರೀ ಬಿ. ಸಿ. ನಂಜುಂಡಯ್ಯ.—ಈ ವಿಚಾರವನ್ನು ಸ್ಪಷ್ಟೀಕರಿಸುತ್ತಾ, ಅಲ್ಲಿರುವ ರಿಸರ್ಚ್ ಆಫೀಸರ ಸಂಬಳವನ್ನು ತಾವು ಕೊಡುತ್ತಿದ್ದೀರೋ ಅಥವಾ ಸೆಂಟ್ರಲ್ ಗೌರ್ನಮೆಂಟಿನವರು ಕೊಡುತ್ತಾರೋ ಎಂಬುದನ್ನು ತಿಳಿಸುವಿರಾ!

H. SIDDAVEERAPPA.—So far as I know, it is a joint scheme. How much exactly is borne by the Central Government and how much by this state Government, I want notice to answer that.

ಶ್ರೀ ಬಿ. ಸಿ. ನಂಜುಂಡಯ್ಯ.—ಈ ಬಗ್ಗೆ ಬೆಳೆದ ಹಣ್ಣಿನ ಮಾರಾಟವನ್ನು ಯಾವ ರೀತಿ ಮಾಡುತ್ತೀರಿ?

ಶ್ರೀ ಎಚ್. ಸಿದ್ದವೀರಪ್ಪ.—ಟೆಂಡರ್ ಮೂಲಕ ಮಾಡುತ್ತೇವೆ.

ಶ್ರೀ ಬಿ. ಸಿ. ನಂಜುಂಡಯ್ಯ.—ಈ ಬಗ್ಗೆ day to day ಟೆಂಡರ್ ಮೂಲಕ ವ್ಯವಸ್ಥೆ ಮಾಡುತ್ತೀರಾ?

ಶ್ರೀ ಎಚ್. ಸಿದ್ದವೀರಪ್ಪ.—ಇಲ್ಲ. ವರ್ಷಕ್ಕೆ ಒಂದು ಸಾರಿ ಟೆಂಡರ್ ಮೂಲಕ ಏರ್ಪಾಡಾರಿ ಮಾಡಲಾಗುತ್ತದೆ.

Mr. SPEAKER.—But you have given the monthly yield.

ಶ್ರೀ ಬಿ. ಸಿ. ನಂಜುಂಡಯ್ಯ.—ಟೆಂಡರ್ call for ಮಾಡಿ, ಬರದೆ ಇರುವ ಸಂದರ್ಭವಿದೆಯೇ?

ಶ್ರೀ ಎಚ್. ಸಿದ್ದವೀರಪ್ಪ.—ನೋಟಿಸ್.

ಶ್ರೀ ಬಿ. ಸಿ. ನಂಜುಂಡಯ್ಯ.—ಈ ರೀತಿ ಟೆಂಡರ್ call for ಮಾಡಿರುವುದು ನಿಜವೇ?

Sri H. SIDDAVEERAPPA.—I have the information, Sir. It is that tenders are called for and are also accepted. Both the systems are there.

Sri. A. BHEEMAPPA NAIK—Will the Government be pleased to state whether they are seasonal crops?

Sri H. SIDDAVEERAPPA.—I am unable to understand that question.

Sri A. BHEEMAPPA NAIK.—Certain fruits are grown there in certain seasons of the year. Are they seasonal crops?

ಶ್ರೀ ಎಚ್. ಸಿದ್ದವೀರಪ್ಪ.—ಹಣ್ಣುಗಳು ಋತು ಧರ್ಮಕ್ಕನುಸಾರವಾಗಿ ಬಿಡುತ್ತವೆ.

ಶ್ರೀ ಎ. ಭೀಮಪ್ಪನಾಯಕ್. - 1951ನೆಯ ಇಸವಿಯಲ್ಲಿ ಆಯಾ ತಿಂಗಳಲ್ಲಿ ಬಿಟ್ಟಿರುವ ಹಣ್ಣಿನ ಫಸಲನ್ನು 1952ನೆಯ ಇಸವಿಯಲ್ಲಿ ಆಯಾ ತಿಂಗಳಲ್ಲಿ ಬಿಟ್ಟಿರುವ ಹಣ್ಣಿನ ಫಸಲಿಗೆ ಹೋಲಿಸಿದರೆ ಕಡಮೆಯಾಗಿರುವುದಕ್ಕೆ ಕಾರಣವೇನು?

ಶ್ರೀ ಎಚ್. ಸಿದ್ದವೀರಪ್ಪ.—ಒಂದು ವರ್ಷದಲ್ಲಿ ಫಸಲು ಚೆನ್ನಾಗಿ ಬರುತ್ತದೆ. ಮತ್ತೊಂದು ವರ್ಷದಲ್ಲಿ ಚೆನ್ನಾಗಿ ಬರುವುದಿಲ್ಲ; ಇದೇ ಕಾರಣ.

ಶ್ರೀ ಎ. ಭೀಮಪ್ಪನಾಯಕ್.—ಇವೆರ್ಲಾ irrigation crop ಎಂದು ತಿಳಿಯೋಣವೇ ಅಥವಾ rainfall crop ಎಂದು ತಿಳಿಯೋಣವೆ?

Sri H. SIDDAVEERAPPA.- Irrigation crop and also rainfall crop.

ಶ್ರೀ ಎ. ಭೀಮಪ್ಪನಾಯಕ್.—ಈ irrigation crop ವಿಚಾರದಲ್ಲಿ, ಯಾವುದಾದರೂ ಸರಿಯಾಗಿ ಆಗುತ್ತಿಲ್ಲವೇ? ಯಾವುದಾದರೂ ಭಾವಿಯಲ್ಲಿ ನೀರಿಲ್ಲವೆಂದು complaint ಬಂದಿದೆಯೇ?

ಶ್ರೀ ಎಚ್. ಸಿದ್ದವೀರಪ್ಪ.—ಆ ರೀತಿ complaint ಯಾವುದೂ ಬಂದಿಲ್ಲ.

ಶ್ರೀ ಎ. ಭೀಮಪ್ಪನಾಯಕ್.—ಹಾಗಾದರೆ 1-4-1951ರಿಂದ 1-4-1952ರ ವರೆಗೆ ಇರತಕ್ಕ ಆದಾಯಕ್ಕೂ 1-4-1952ರಿಂದ 1-1-1953ರ ವರೆಗೆ ಇರತಕ್ಕ ಆದಾಯಕ್ಕೂ ಅಜಗಜಾಂತರ ವ್ಯತ್ಯಾಸವಿರುವುದಕ್ಕೆ ಕಾರಣವೇನು?

ಶ್ರೀ ಎಚ್. ಸಿದ್ದವೀರಪ್ಪ.—ಎರ್ಲೋ ನೂರಾರು ರೂಪಾಯಿಗಳ ವ್ಯತ್ಯಾಸ ಮಾತ್ರವಿವೆ, ಅಜಗಜಾಂತರ ವ್ಯತ್ಯಾಸವಿಲ್ಲ.

ಶ್ರೀ ಎ. ಭೀಮಪ್ಪನಾಯಕ್.—1-12-1951ರಲ್ಲಿ ರೂ. 2,843-3-0 ಆದಾಯವಿದ್ದು 1-12-1952ರಲ್ಲಿ ಬಂದಿರುವ ಆದಾಯ ರೂ. 464-2-6 ವೆಂದರೆ, ಈ ವ್ಯತ್ಯಾಸ ಅಜಗಜಾಂತರವೇ ಅಥವಾ ಗಜಜಾಂತರವೇ!

ಶ್ರೀ ಎಚ್. ಸಿದ್ದವೀರಪ್ಪ.—ಅಜ, ಗಜ, ಇವೆರಡರ ನಡುವೆ.

ಶ್ರೀ ಎ. ಭೀಮಪ್ಪನಾಯಕ್.—ಈ ರೀತಿ ವ್ಯತ್ಯಾಸವಾಗಿರುವುದಕ್ಕೆ ಕಾರಣವೇನು?

ಶ್ರೀ ಎಚ್. ಸಿದ್ದವೀರಪ್ಪ.—ಆಗಲೇ ಹೇಳಿದ ಹಾಗೆ, ಒಂದು ವರ್ಷದ ಫಸಲು ಜಾಸ್ತಿಯಾಗಿರಬಹುದು, ಇನ್ನೊಂದು ವರ್ಷದ ಫಸಲು ಕಡಮೆಯಾಗಿರಬಹುದು.

Sri A. BHEEMAPPA NAIK.—Am I to expect a hypothetical answer or a definite answer? ಬಂದಿರಬಹುದು, ಆಗಿರಬಹುದು ಎಂದರೇನು?

Sri H. SIDDAVEERAPPA.—If my friend wants a categorical answer the answer is 'Notice.'

12-30 P.M.

Sri A. BHEEMAPPA NAIK.—If it had been said like that earlier, I would not have put any more questions. I am

putting one more question, Sir. Is it want of proper supervision or is it misappropriation? Will the Government be pleased to investigate and find out why this income is reduced considerably?

Mr. SPEAKER.—The Hon'ble Minister wants notice.

Private Cattle in the care of Animal Husbandry Department.

Q.—421. **Sri S. MUNISWAMIAH** (Bangalore North—Scheduled Castes).—Will the Government be pleased to state :—

(*a*) the number of private cattle that are now in the care of the Animal Husbandry Department in Hessarghatta;

(*b*) the amount levied per cattle per month;

(*c*) the total amount realised on this account since 1st April 1952 to 1st February 1953;

(*d*) the establishment charges incurred particularly under this head;

(*e*) the quantity of cowdung collected since 1st April 1952;

(*f*) the way this cowdung was disposed of; and

(*g*) the financial worth of the manure of cowdung so collected?

A.—**Sri H. SIDDAVEERAPPA** (Minister for Home and Industries).—

(*a*) 120.

(*b*) For cows or heifers Rs. 10 per mensem.

Calves Rs. 5 per mensem (up to 1 year of age)

Buffaloes Rs. 12 per mensem (Professional concerns).

Buffalo calves Rs. 9 per mensem (Professional concerns).

Buffaloes Rs. 15 per mensem (Non-professional concerns).

Buffalo calves Rs. 7 8–0 per mensem.

(*c*) Rs. 8,686.

(*d*) Rs. 5,350 2–0.

(*e*) 306 cart loads.

(*f*) Utilised for growing foodgrains on the Farm and the cultivation of green grass.

(*g*) Rs. 612.

ಶ್ರೀ ಆರ್. ಮುನಿಸ್ವಾಮಯ್ಯ.—ಈ ಫಾರಂನಲ್ಲಿ 120 ದನಗಳಿಗೆ ಎಷ್ಟು ಎಕರೆ ಭೂಮಿ ಬಿಟ್ಟುಕೊಟ್ಟಿದ್ದೀರಿ?

ಶ್ರೀ ಎಚ್. ಸಿದ್ದವೀರಪ್ಪ.—ಖಚಿತವಾಗಿ ಗೊತ್ತಿಲ್ಲ, It is within about 500 acres.

ಶ್ರೀ ಆರ್. ಮುನಿಸ್ವಾಮಯ್ಯ.—ಖಾಸಗಿ ದನಗಳನ್ನೂ ನರ್ಸಾರದವರು ಮೇಯಿಸಬೇಕಾದ ಅವಶ್ಯಕತೆ ಇದೆಯೆ?

ಶ್ರೀ ಎಚ್. ಸಿದ್ದವೀರಪ್ಪ.—ಬೆಂಗಳೂರಿನ ನಾಗರಿಕರ ಅನುಕೂಲಕ್ಕೆ ಆ ರೀತಿ ಮಾಡಿದೆ. ಅದೂ ಅಲ್ಲದೆ ದುಡ್ಡು ಬರುತ್ತದೆ. It is a little paying section.

ಶ್ರೀ ಆರ್. ಮುನಿಸ್ವಾಮಯ್ಯ.—ಇಲ್ಲಿಂದ ಗೊಬ್ಬರ ಸಾಗಿ ಹೋಗುತ್ತಾ ಇದೆ ಎಂದು ಹೇಳುತ್ತಾರೆ, ನಿಜವೇ?

ಶ್ರೀ ಎಚ್. ಸಿದ್ದವೀರಪ್ಪ.—ಆಹಾರ ಧಾನ್ಯ ಬೆಳೆಯುವುದಕ್ಕೆ ಹೆಚ್ಚಾಗಿ ಗೊಬ್ಬರ ಹೋಗುತ್ತಾ ಇದೆ.

ಶ್ರೀ ಆರ್. ಮುನಿಸ್ವಾಮಯ್ಯ.—ಹಸಿರು ಹುಲ್ಲು ಬೆಳೆಯುತ್ತೀವೆ ಎಂದು ಹೇಳಿದ್ದೀರಿ. ಅದಕ್ಕೆ ಕೇಳಿದೆ.

ಶ್ರೀ ಎಚ್. ಸಿದ್ದವೀರಪ್ಪ.—ಹಸಿರು ಹುಲ್ಲು ಬೆಳೆದು ಸ್ಕ್ವಾಕ್‌ಮಾಡಿ 2 ರೂಪಾಯಿನಂತೆ concession rate ನಲ್ಲಿ ಕೊಡುತ್ತೀವೆ.

ಶ್ರೀ ಎಸ್. ಸಿದ್ದವೀರಪ್ಪ.—ಆ ಫಾರಮ್ಮಿನಲ್ಲಿ ತಯಾರಾಗತಕ್ಕ ಗೊಬ್ಬರವನ್ನು ಹೊರಗಡೆ ಇತರ ಜನಗಳಿಗೆ ಕೊಡುತ್ತೀರಾ?

ಶ್ರೀ ಎಚ್. ಸಿದ್ದವೀರಪ್ಪ.—ಆ ರೀತಿ ಕೊಡುತ್ತಿಲ್ಲ ಎಂದು ಗೊತ್ತಾಗಿದೆ.

ಶ್ರೀ ಗೋರೂರು ಸಿದ್ದಪ್ಪ.—ಹಾಗೆ ಕೊಟ್ಟಿರುವುದನ್ನು ತಮ್ಮ ಗಮನಕ್ಕೆ ತಂದರೆ?

ಶ್ರೀ ಎಚ್. ಸಿದ್ದವೀರಪ್ಪ.—ತಂದಾಗ ತಕ್ಕ ಕಾರ್ಯಕ್ರಮ ತೆಗೆದುಕೊಳ್ಳುತ್ತೀವೆ.

ಶ್ರೀ ವಿ. ಮಸಿಯಪ್ಪ.—ಇಲ್ಲ ಸುಧಾರಿಸಿದ ನವೀನ ರೀತಿಯಲ್ಲಿ ಹುಲ್ಲುಬೆಳೆಯುವ ಏರ್ಪಾಡು ಮಾಡಲಾಗಿದೆಯೇ?

ಶ್ರೀ ಎಚ್. ಸಿದ್ದವೀರಪ್ಪ.—ಹೌದು.

ಶ್ರೀ ವಿ. ಮಸಿಯಪ್ಪ.—ಆ ತರಹ ಹುಲ್ಲಿನ ಅವಶ್ಯಕತೆ ಇತರ ಕಡೆಗಳಿಗೂ ಇರುವುದರಿಂದ, ಆ ರೀತಿ ಬೆಳೆಯುವಂತೆ ಪ್ರಚಾರ ಮಾಡಲಿಕ್ಕೆ ಏರ್ಪಾಡು ಮಾಡಲಾಗಿದೆಯೇ?

ಶ್ರೀ ಎಚ್. ಸಿದ್ದವೀರಪ್ಪ.—ಇದು ಎಕ್ಸ್‌ಪೆರಿಮೆಂಟಲ್ ಫಾರಂ. ಮಾನ್ಯ ಸದಸ್ಯರೂ ನೋಡಿದ್ದಾರೆ ಎಂದು ತಿಳಿದುಕೊಂಡಿದ್ದೇನೆ. ಇಲ್ಲಿ ಫಲಪ್ರದವಾದರೆ ಬೇರೆ ಕಡೆಗಳಿಗೆ ಪ್ರಾಪಗೇಟ್ ಮಾಡುತ್ತೀವೆ.

ಶ್ರೀ ಎಲ್. ಹುಚ್ಚಮಾಸ್ತಿಗೌಡ.—ಸ್ವಲ್ಪ ದುಡ್ಡು ಲಾಭ ಬರುತ್ತದೆ ಎಂದು ಹೇಳಿದಿರಿ. 500 ಎಕರೆ ಇದೆ. ಒಂದು ಎಕರೆ ಹುಲ್ಲಿಗೆ 7 ರೂಪಾಯಿನಂತೆ ಮಾರಿದ್ದೀರಿ ಎಂಬುದು ಅಂಕಿ ಅಂಶಗಳಿಂದ ಗೊತ್ತಾಗುವುದಿಲ್ಲವೇ?

ಶ್ರೀ ಎಚ್. ಸಿದ್ದವೀರಪ್ಪ.—500 ಎಕರೆ ಬರೀ ಹುಲ್ಲೇ ಅಲ್ಲ, ನಮ್ಮ ಫಾರಂನಲ್ಲೂ ಇರುವುದರಿಂದ ಅಷ್ಟು ಆಗುತ್ತದೆ.

ಶ್ರೀ ಎಲ್. ಹುಚ್ಚಮಾಸ್ತಿಗೌಡ.—ಇನ್ನೂ ಸ್ವಲ್ಪ ಹೆಚ್ಚು ದುಡ್ಡನ್ನು ಹಾಕುವುದು ಉತ್ತಮವಲ್ಲವೇ?

ಶ್ರೀ ಎಚ್. ಸಿದ್ದವೀರಪ್ಪ.—ನಿಮ್ಮ ಸಲಹೆಯನ್ನು ಯೋಚನೆ ಮಾಡುತ್ತೀವೆ.